# ‘ಫೇಸ್‌ಬುಕ್’ ದಶಕದ ನಂ.1 ಆ್ಯಪ್

ಕಳೆದ ಹತ್ತು ವರ್ಷಗಳಲ್ಲಿ (2010–2019) ಸ್ಮಾರ್ಟ್‌ಫೋನ್ ಹಾಗೂ ಗ್ರಾಹಕರ ಎಲೆಕ್ಟ್ರಾನಿಕ್ಸ್ ಇಂಡಸ್ಟ್ರಿಯಲ್ಲಂತೂ ನಿರೀಕ್ಷೆಗೂ ಮೀರಿದ ಬೆಳವಣಿಗೆ ಮತ್ತು ಅತ್ಯಾಧುನಿಕತೆ ಕಾಣಬಹುದು. ಈ ಸಂದರ್ಭದಲ್ಲಿ ‘ಆ್ಯಪ್ ಆ್ಯನ್ನಿ’ (App Annie) ಸಂಸ್ಥೆಯು ಕಳೆದ ಹತ್ತು ವರ್ಷಗಳಿಂದ ಸ್ಮಾರ್ಟ್‌ಫೋನ್‌ಗಳಲ್ಲಿ ಅತಿ ಹೆಚ್ಚು ಡೌನ್‌ಲೋಡ್ ಮಾಡಿದ ಆ್ಯಪ್‌ಗಳ ಕುರಿತಂತೆ ‘ಟಾಪ್ 10’ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪಟ್ಟಿಯ ಅಗ್ರಸ್ಥಾನದಲ್ಲಿರುವುದು ಫೇಸ್‌ಬುಕ್ ಸಂಸ್ಥೆ. ಟಾಪ್ 10 ಆ್ಯಪ್‌ಗಳು ಯಾವ್ಯಾವು?

**ಫೇಸ್‌ಬುಕ್:** ಸಾಮಾಜಿಕ ಜಾಲತಾಣಗಳಲ್ಲಿ ಅತಿ ಹೆಚ್ಚು ಸದ್ದು ಮಾಡುತ್ತಿರುವ ಆ್ಯಪ್ ಇದಾಗಿದ್ದು, ಕಳೆದ ದಶಕದಲ್ಲಿ ಅತಿ ಹೆಚ್ಚು ಡೌನ್‌ಲೋಡ್ ಆದ ಆ್ಯಪ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಬಹುತೇಕ ಬಳಕೆದಾರರು ಇದನ್ನು ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ರೂಪವಾಗಿ ಬಳಸುತ್ತಿದ್ದು, ಮಾಹಿತಿಯನ್ನೂ ಸಾಮಾಜಿಕವಾಗಿ ಫೇಸ್‌ಬುಕ್ ಮೂಲಕ ಹಂಚಿಕೊಳ್ಳುತ್ತಿದ್ದಾರೆ. ಸ್ನೇಹಿತರ ಒಗ್ಗೂಡಿಸುವಿಕೆ, ಪರಸ್ಪರ ಸ್ನೇಹ ಸಂಬಂಧ ಬೆಸೆಯುವಿಕೆಗೆ ಕಾರಣವಾದ ಫೇಸ್‌ಬುಕ್, ಅಪಬಳಕೆಗೂ ಹೆಸರಾಗಿದೆ.

**ಫೇಸ್‌ಬುಕ್ ಮೆಸೇಂಜರ್:** ಅತಿ ಹೆಚ್ಚು ಡೌನ್‌ಲೋಡ್ ಆದ ಪಟ್ಟಿಯಲ್ಲಿ ಎರಡನೇ ಸ್ಥಾನವನ್ನು ಫೇಸ್‌ಬುಕ್‌ನ ಭಾಗವಾದ ‘ಫೇಸ್‌ಬುಕ್ ಮೆಸೇಂಜರ್’ ಪಡೆದುಕೊಂಡಿದೆ. 2011ರಲ್ಲಿ ಅಸ್ತಿತ್ವಕ್ಕೆ ಬಂದ ಈ ಆ್ಯಪ್, ಮೊಬೈಲ್‌ನಲ್ಲಿ ಫೇಸ್‌ಬುಕ್ ಬಳಸುವವರು ತಮ್ಮ ಫೇಸ್‌ಬುಕ್ ಸ್ನೇಹಿತರೊಂದಿಗೆ ಚಾಟ್ ಮಾಡಲು ಅನುಕೂಲ ಮಾಡಿಕೊಡುತ್ತದೆ. ಸ್ಮಾರ್ಟ್‌ಫೋನ್‌ಗಳಲ್ಲಿನ ಸಾಮಾನ್ಯ ಮೆಸೇಜಿಂಗ್ ವ್ಯವಸ್ಥೆಯೊಂದಿಗೂ ಹೊಂದಿಕೊಂಡು ಚಾಟಿಂಗ್‌ಗೆ ಅನುವು ಮಾಡಿಕೊಡುತ್ತದೆ.

**ವಾಟ್ಸ್‌ಆ್ಯಪ್ ಮೆಸೆಂಜರ್:** 2009ರ ಮೇ 3ರಂದು ಅಸ್ತಿತ್ವಕ್ಕೆ ಬಂದ ಆ್ಯಪ್ ಇದಾಗಿದ್ದು, ಫೇಸ್‌ಬುಕ್‌ನಂತೆ ಸಾರ್ವಜನಿಕವಾಗಿ ಇದರಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿಲ್ಲ. ಗ್ರೂಪ್‌ಗಳ ಮೂಲಕ ಸೀಮಿತ ವ್ಯಕ್ತಿಗಳೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಳ್ಳಬಹುದು. ಎಲ್ಲಕ್ಕಿಂತ ಮಿಗಿಲಾಗಿ ಇದು ವೈಯಕ್ತಿಕವಾಗಿ ಹರಟಲು ಅನುಕೂಲ. ಮೆಸೇಜ್ ಪ್ರಿಯರಿಗೆ ವಾಟ್ಸ್‌ಆ್ಯಪ್ ಒಂದು ರಸದೌತಣ. ಇದರ ನಾಗಾಲೋಟಕ್ಕೆ ಬೆಚ್ಚುಬಿದ್ದ ಫೇಸ್‌ಬುಕ್, ವಾಟ್ಸ್‌ಆ್ಯಪ್ ಸಂಸ್ಥೆಯನ್ನೇ ಖರೀದಿಸಿದೆ.

**ಇನ್‌ಸ್ಟಾ ಗ್ರಾಂ:** ಪಟ್ಟಿಯ ನಾಲ್ಕನೇ ಸ್ಥಾನದಲ್ಲೂ ಫೇಸ್‌ಬುಕ್‌ನ ಒಡೆತನದ ‘ಇನ್‌ಸ್ಟಾ ಗ್ರಾಂ’ ಆ್ಯಪ್ ಇದೆ. ಫೋಟೊ ಹಾಗೂ ವಿಡಿಯೊ ಶೇರಿಂಗ್‌ಗೆ ಇದು ಖ್ಯಾತಿ ಪಡೆದುಕೊಂಡಿದೆ. 2010ರಲ್ಲಿ ಬಿಡುಗಡೆಗೊಂಡ ಈ ಆ್ಯಪ್ ಪ್ರಾರಂಭದಲ್ಲಿ ಅಷ್ಟೇನೂ ಜನಪ್ರಿಯತೆ ಗಳಿಸಿರಲಿಲ್ಲ. 2018ರ ನಂತರ ಹೆಚ್ಚು ಮುನ್ನೆಲೆಗೆ ಬಂದ ಈ ಆ್ಯಪ್ ಅನ್ನು ಕಾಲೇಜು ಯುವಕ–ಯುವತಿಯರು ಹೆಚ್ಚು ಬಳಸಲು ಶುರು ಮಾಡಿ ಟ್ರೆಂಡ್ ಆಗಿದೆ.

**ಸ್ನಾಪ್ ಚಾಟ್:** ಮೆಸೇಜ್ ಮಾಡಲು ಹೆಚ್ಚು ಸಹಕಾರಿಯಾಗಿರುವ ಈ ಆ್ಯಪ್ 2011ರಲ್ಲಿ ಬಿಡುಗಡೆಗೊಂಡಿತು. ಪ್ರಾರಂಭದಲ್ಲಿ ಈ ಆ್ಯಪ್ ಹೆಚ್ಚು ಸದ್ದು ಮಾಡಿತಾದರೂ ಫೇಸ್‌ಬುಕ್–ವಾಟ್ಸ್‌ಆ್ಯಪ್ ಮುಂದೆ ಮಂಕಾಗಿದೆ. ಆದರೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಐದನೇ ಸ್ಥಾನ ಪಡೆದುಕೊಂಡಿದೆ.

**ಸ್ಕೈಪ್:** ‘ವಿಡಿಯೊ ಕಾಲಿಂಗ್’ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿ ಶುರು ಮಾಡಿದ ಆ್ಯಪ್ ಇದಾಗಿದೆ. ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ಗಳಲ್ಲಿ ವಿಡಿಯೊ ಕಾಲಿಂಗ್‌ಗೆ ಹೆಚ್ಚು ಬಳಕೆಯಲ್ಲಿದೆ. ವಾಯ್ಸ್ (ಧ್ವನಿ) ಚಾಟ್ ವ್ಯವಸ್ಥೆಗೂ ಇದು ಬಳಕೆಯಾಗುತ್ತಿದೆ; ಸದ್ಯ ಆರನೇ ಸ್ಥಾನದಲ್ಲಿದೆ.

**ಟಿಕ್‌ಟಾಕ್:** ಸಾರ್ವಜನಿಕರ ವಿಡಿಯೊ ವಿಚಾರವಾಗಿ 2018–2019ರಲ್ಲಿ ಹೆಚ್ಚು ಟ್ರೆಂಡ್ ಹುಟ್ಟುಹಾಕಿದ ಆ್ಯಪ್ ‘ಟಿಕ್‌ಟಾಕ್’. ಕೆಲವರನ್ನು ದಿನಬೆಳಗಾಗುವುದರಲ್ಲಿ ಸ್ಟಾರ್ ಮಾಡಿ, ಇನ್ನೂ ಕೆಲವರ ಬದುಕನ್ನೇ ಕತ್ತಲೆಗೆ ದೂಡಿದ ಖ್ಯಾತಿ–ಕುಖ್ಯಾತಿಗೆ ಇದು ಹೆಸರಾಗಿದೆ. ಏಳನೇ ಸ್ಥಾನದಲ್ಲಿರುವ ಈ ಆ್ಯಪ್ ಅನ್ನು ಟೈಂಪಾಸ್ ಮಾಡಲು ಬಳಸಿಕೊಂಡವರೇ ಹೆಚ್ಚು.

**ಯುಸಿ ಬ್ರೌಸರ್:** ಚೀನಾದ ಆಲಿಬಾಬಾ ಗ್ರೂಪ್‌ನ ಬ್ರೌಸರ್ ಆ್ಯಪ್ ಇದು. ಸದ್ಯ ಎಂಟನೇ ಸ್ಥಾನದಲ್ಲಿರುವ ಇದು, ಗೂಗಲ್ ಕ್ರೋಮ್‌ಗೆ ಪ್ರಬಲ ಪೈಪೋಟಿ ನೀಡುತ್ತಿದೆ.

**ಯೂಟ್ಯೂಬ್:** ಒಂಬತ್ತನೇ ಸ್ಥಾನದಲ್ಲಿರುವ ಯೂಟ್ಯೂಬ್, ವಿಡಿಯೊ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿರುವ ಆ್ಯಪ್. ವಿಡಿಯೊಗಳ ಗುಚ್ಛವೆಂದೇ ಇದನ್ನು ಕರೆಯಬಹುದು. ಸಿನಿಮಾ, ಹಾಡು, ಫನ್ನಿ ವಿಡಿಯೊ, ಮಾಹಿತಿ ತಿಳಿಸುವ ವಿಡಿಯೊ, ಸುದ್ದಿ ಮಾಧ್ಯಮಗಳ ನೇರ ಪ್ರಸಾರ, ಮನರಂಜನೆ ವಾಹಿನಿಗಳ ಪ್ರಸಾರ ಹೀಗೆ ನಾನಾ ರೀತಿಯ ವಿಡಿಯೊಗಳನ್ನು ಈ ಒಂದೇ ಆ್ಯಪ್ ಹಾಗೂ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

**ಟ್ವಿಟರ್:** 2006 ಸಾಮಾಜಿಕ ಜಾಲತಾಣಗಳ ಲೋಕಕ್ಕೆ ಕಾಲಿಟ್ಟ ಟ್ವಿಟರ್ ಆ್ಯಪ್, ಅಭಿಪ್ರಾಯ ವ್ಯಕ್ತಪಡಿಸಲು ಉತ್ತಮ ವೇದಿಕೆ. ಇದರಲ್ಲಿ 280 ಕ್ಯಾರೆಕ್ಟರ್‌ವುಳ್ಳ ಅಕ್ಷರಗಳನ್ನಷ್ಟೇ ಟೈಪಿಸಲು ಸಾಧ್ಯ. ಸದ್ಯ ಇದು ಹತ್ತನೇ ಸ್ಥಾನದಲ್ಲಿದೆ.

■ **ಶಶಿಕುಮಾರ್ ಸಿ.**